**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 1029/2016**

**ಸಿ.ಡಬ್ಲ್ಯೂಃ 1 ಪಿ.ಡಬ್ಲ್ಯೂಃ 1**

ಸಾಕ್ಷಿದಾರನ ಹೆಸರು : ನಾಗರೆಡ್ಡಿ
ತಂದೆಯ ಹೆಸರು : ಸಿದ್ದನಗೌಡ
ವಯಸ್ಸು : 52 ವರ್ಷ
ಕೆಲಸ : ಪಿ ಐ ಲೋಕಾಯುಕ್ತ ಬಳ್ಳಾರಿ
ವಾಸ : ಬಳ್ಳಾರಿ

**ಸಾಕ್ಷಿಗೆ ದಿನಾಂಕಃ26.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**,

1. ನಾನು 11.05.2015 ರಿಂದ 08.06.2017 ರವರೆಗೆ ಸಿರುಗುಪ್ಪ ವೃತ್ತದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿಃ 07.05.2016 ರಂದ ಬೆಳ್ಳಗೆ 06.00 ಗಂಟೆಗೆ ನನಗೆ ಫೋನ್ ಮುಖಾಂತರ ಮಾಹಿತಿ ಬಂದಿದ್ದು ಸಿರುಗುಪ್ಪ ನಗರದ ಮಂಜುನಾಥ ಟಾಕೀಸ್ ಬಳಿ ವಿಜಯನಗರ ಕಾಲುವೆ ಮೇಲೆ ಯಾರೋ ಅನುಮಾನಸ್ಪದ ವ್ಯಕ್ತಿಗಳು ಏನೋ ಮಾಡುತ್ತಿದ್ದಾರೆ ಅಂತಾ ತಿಳಿಯಿತು. ನಂತರ ನಾನು ಚಾಸಾ 4 ರಿಂದ 8 ರವರಿಗೆ ಬರಮಾಡಿಕೊಂಡು ನಾವೆಲ್ಲರೂ ಸ್ಥಳಕ್ಕೆ ಹೋದೆವು. ಮಂಜುನಾಥ ಟಾಕೀಸ ಮರೆಯಲ್ಲಿ ನಿಂತು ನೋಡಲಾಗಿ ಒಂದು ಇಂಡಿಕಾ ಕಾರು ನಿಂತಿದು 4 ಜನ ಅನುಮಾನಸ್ಪಾದವಾಗಿ ನಿಂತಿದ್ದು, ನಾವು ದಾಳಿ ಮಾಡಿದಾಗ ಒಟ್ಟು 3 ಜನ ಸಿಕ್ಕಿಬಿದ್ದರು. ಒಬ್ಬನು ತಪ್ಪಿಸಿಕೊಂಡು ಓಡಿ ಹೋದನು. ಸಿಕ್ಕಿಬಿದ್ದವರ ಹೆಸರು ಕೇಳಲಾಗಿ ರವಿಚಂದ್ರ, ಸುಭಾಷ, ಆದಿಬಸಪ್ಪ ಅಂತಾ

ತಿಳಿಯಿತು. ಓಡಿ ಹೋದವನ ಹೆಸರು ಖಾಜ ಹುಸೇನ ಅಲಿಯಾ ಒಂಟೆ ಖಾಜಾ ಎಂದು ತಿಳಿಯಿತು. ಸದರಿ ಕಾರು ನಂ ಕೆ ಎ 35 ಎನ್ 3659 ಆಗಿತ್ತು. ಸದರಿ ಕಾರಿನಲ್ಲಿ ಸಾವಿರ ರೂಪಾಯಿ ನೋಟಿಗೆ ಹೊಂದಿಕೆಯಾಗುವಂತೆ ಕಟ್ ಮಾಡಿದ ಬಿಳಿ ಹಾಳೆಯ ಬಂಡಲ್ ಮತ್ತು ಪ್ಲಾಸ್ಟಿಕ್ ಕವರಗಳು, ಬಿಳಿ ಹಾಳೆ, ಟೇಲರ್ ಮಾರ್ಕರ್ ಕಲರ ಮತ್ತು ಸಾಬೂನಿನಂತೆ ಇರುವ ಚಿಕ್ಕ ಕೇಕ್ ಗಳ ಒಂದು ರೆಟ್ಟಿನ ಬಾಕ್ಸ. ಬಂಗಾರದ ಬಣ್ಣ ಇರುವ ತೊಗರೆ ಬೆಳೆ ಆಕಾರದ 200 ಗ್ರಾಂ ತುಂಡುಗಳು, ಬ್ರಶ್, ಪ್ಲಾಸ್ಟಿಕ್ ರೋಲ್ ಗಳು ಇದ್ದವು. ಅದರ ಬಗ್ಗೆ ಅರೋಪಿತರಿಗೆ ವಿಚಾರಿಸಿದಾಗ ಜನರಿಗೆ ಮೋಸ ಮಾಡಿ 1 ಲಕ್ಷ ರೂಪಾಯಿಗೆ 3 ಲಕ್ಷ ರೂಪಾಯಿ ಕೊಡುವುದಾಗಿ ನಂಬಿಸಿ ಖೋಟಾ ನೋಟ್ ಕೊಡುವುದಾಗಿ ಮತ್ತು ಬಂಗಾರವೆಂದು ತೊಗರಿ ಬೆಳೆ ಆಕಾರದ ಬಂಗಾರದ ಬಣ್ಣದ ತುಂಡುಗಳನ್ನು ಕೊಟ್ಟು ಜನರಿಗೆ ಮೋಸ ಮಾಡುವ ಉದ್ದೇಶ ಹೊಂದಿದ್ದೆವು ಎಂದು ಒಪ್ಪಿಕೊಂಡರು. ಚಾಸಾ 5 ರವರ ಮೂಲಕ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು, ಸ್ಥಳದಲ್ಲಿ ಪಂಚನಾಮೆ ಜರುಗಿಸಿ. ಆರೋಪಿ ಮತ್ತು ಜಪ್ತದ ಮಾಲ ಸಮೇತ ನ್ನು ಠಾಣೆಗೆ ಹಾಜರಾಗಿ ದೂರು ದಾಖಲು ಮಾಡಿದೆವು.

3. ಪಂಚನಾಮೆಯನ್ನು ನಿಪಿಃ 1 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು. ದೂರನ್ನು ನಿಪಿಃ 2 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ನಾನು ಗುರುತಿಸಬಲ್ಲೆ. ಆರೋಪಿ ನಂ 1, 2 ಮತ್ತು 4 ಗೈರು ಹಾಜರಾಗಿದ್ದು ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

4. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು ಮಾ ನ್ನು ನೋಡಿ ಗುರುತಿಸುತ್ತಾರೆ. ನೋಟನಂತೆ ಕಾಣುವ ಬಿಳಿ ಬಣ್ಣದ ಕಟ್ಟುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು. ಪ್ಲಾಸ್ಟಿಕ್ ಕವರನಲ್ಲಿ ಇರುವ ಬಿಳಿ ಬಣ್ಣದ ಹಾಳೆಗಳನ್ನು ಒಟ್ಟಾಗಿ ಮು ಮಾ 2 ಎಂದು ಗುರುತಿಸಲಾಯಿತು. ಸ್ಮಿತ್ ಟೈಲರ್ ಮಾರ್ಕರ ಕಲರ್ ಬಾಕ್ಸನ್ನು ಮು ಮಾ 3 ಎಂದು ಗುರುತಿಸಲಾಯಿತು. ತೊಗರಿ ಬೆಳೆಯಂತೆ ಇರುವ ತುಂಡುಗಳನ್ನು ಒಟ್ಟಾಗಿ ಮು ಮಾ 4 ಎಂದು ಗುರುತಿಸಲಾಯಿತು. ಒಂದು ಬ್ರಶ್ ನ್ನು ಮು ಮಾ 5 ಎಂದು ಗುರುತಿಸಲಾಯಿತು. ಎರಡು ಪ್ಲಾಸ್ಟಿಕ್ ರೋಲ್ಗಳನ್ನು ಒಟ್ಟಾಗಿ ಮು ಮಾ 6 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ**

**ಮಾನ್ಯ ಆರೋಪಿತರ ಪರ ವಕೀಲರು ಪಾಟೀಸವಾಲು ಮಾಡಲು ಕಾಲವಕಾಶವನ್ನು ಕೇಳಿದ್ದು, ಸಕಾರಣ ಇಲ್ಲವಾದ್ದರಿಂದ ಆರೋಪಿತರ ಪರ ಪಾಟೀಸವಾಲು ಇಲ್ಲ ಎಂದು ಪರಿಗಣಿಲಸಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**

**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. /</u>**

**<u>ಸಿ.ಡಬ್ಲ್ಯೂಃ ಪಿ.ಡಬ್ಲ್ಯೂಃ</u>**

ಸಾಕ್ಷಿದಾರನ ಹೆಸರು :
ತಂದೆಯ ಹೆಸರು :
ವಯಸ್ಸು : ವರ್ಷ
ಕೆಲಸ :
ವಾಸ :

**<u>ಸಾಕ್ಷಿಗೆ ದಿನಾಂಕಃ26.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**,

1. ನಾನು ರಿಂದ ರವರೆಗೆ ಪೋಲಿಸ ಠಾಣೆಯಲ್ಲಿ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ**

3. ನಾನು ರವಿಕುಮಾರ ಎಂಬ ಪೇದೆ ಮೂಲಕ ಮು ಮಾ ವನ್ನು ರಾಸಾಯನಿಕ ಪರೀಕ್ಷಗೆ ಕಳುಹಿಸಿದೆನು. ನಾನು ಯಾವುದೇ ಮು ಮಾ ವನ್ನು ರಾಸಯಾನಿಕ ಪರೀಕ್ಷಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೋಸ್ಕರ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿತರಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.